# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ. : 50 ಫ್ರಾ.ಸಾ. :56**

| | | |
|---|---|---|
| ಸಾಕ್ಷಿಯ ಹೆಸರು | : | ವೆಂಕಟರಮಣ ಟಿ. ನಾಯ್ಕ |
| ತಂದೆಯ ಹೆಸರು | : | ತಿಪ್ಪಯ್ಯ ನಾಯ್ಕ |
| ವಯಸ್ಸು | : | 44 ವರ್ಷ |
| ಕೆಲಸ | : | ಸಿ.ಹೆಚ್.ಸಿ.-625., ಕಾರವಾರ ಮಹಿಳಾ ಪೊಲೀಸ್ ಠಾಣೆ |
| ವಾಸ | : | ಕಾರವಾರ |

**ದಿನಾಂಕಃ 19-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. 2013 ರಿಂದ 2019 ರವರೆಗೆ ನಾನು ಕಾರವಾರದ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ಸಮಯದಲ್ಲಿ ನನ್ನನ್ನು ಕಾರವಾರದ ಸಿ.ಪಿ.ಐ ಕಚೇರಿಗೆ ನಿಯೋಜನೆ ಮಾಡಲಾಗಿತ್ತು. ನನಗೆ ಇಲಾಖಾ ವತಿಯಿಂದ ಕಂಪ್ಯೂಟರ್ ಬಳಸುವ ತರಬೇತಿಯನ್ನು ನೀಡಲಾಗಿರುತ್ತದೆ ಹಾಗೂ ಜ್ಞಾನವನ್ನು ಹೊಂದಿರುತ್ತೇನೆ. ತರಬೇತಿ ನೀಡಿದ ಬಗ್ಗೆ ನಮ್ಮ ಸೇವಾ ಪುಸ್ತಕದಲ್ಲಿ ದಾಖಲಾಗಿರುತ್ತದೆ.

2. ತನಿಖೆಗೆ ಸಹಾಯ ಮಾಡಲು ದಿ.23-10-2018 ರಂದು ತನಿಖಾಧಿಕಾರಿಯವರ ಜೊತೆ ಘಟನಾ ಸ್ಥಳಕ್ಕೆ ಹೋಗಿ ತನಿಖೆಗೆ ಸಹಕರಿಸಿರುತ್ತೇನೆ. ತನಿಖಾಧಿಕಾರಿಯು 1 ನೇ ಆರೋಪಿಯಿಂದ ರೈಲ್ವೇ ಟಿಕೇಟುಗಳನ್ನು ಜಪ್ತುಪಡಿಸಿಕೊಂಡು ನಂತರ ಅವುಗಳನ್ನು ಜೆರಾಕ್ಸ್ ಪ್ರತಿಗಳನ್ನಾಗಿಸಿ, ಸದರಿ ಜೆರಾಕ್ಸ್ ಪ್ರತಿಗಳನ್ನು ದಿ.04-12-2018 ರಂದು ಜಪ್ತುಪಡಿಸಿಕೊಳ್ಳುವ ಕಾಲಕ್ಕೆ ತನಿಖಾಧಿಕಾರಿಯ ಸೂಚನೆಯ ಮೇರೆಗೆ ಜಪ್ತುಪಂಚನಾಮೆಯನ್ನು ಠಾಣೆಯ ಕಂಪ್ಯೂಟರಿನ ಮೂಲಕ ಟೈಪ್ ಮಾಡಿ, ಸಹಿ ಮಾಡಿ ತನಿಖಾಧಿಕಾರಿಗೆ ನೀಡಿರುತ್ತೇನೆ. ಸಾಕ್ಷಿಯು ಸದರಿ ಜಪ್ತುಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-64 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-64(ಬಿ) ಎಂದು ಗುರುತಿಸಲಾಯಿತು. ಅದೇ

ರೀತಿ ಸಾಕ್ಷಿಯು ಜಪ್ತುಪಡಿಸಿಕೊಂಡ ರೈಲ್ವೇ ಟಿಕೇಟುಗಳ ಜೆರಾಕ್ಸ್ ಪ್ರತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ–65 ರಿಂದ 70 ಎಂದು ಗುರುತಿಸಲಾಗಿರುತ್ತದೆ.

3. ಆನಂತರ ದಿ.01–01–2019 ರಂದು ಕಾರವಾರದ ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಯಲ್ಲಿ 3 ನೇ ಆರೋಪಿಯಿಂದ ಜಪ್ತುಪಡಿಸಿಕೊಂಡ ಬಂಗಾರದ ಚೈನನ್ನು ಅಕ್ಕಸಾಲಿಗರಿಂದ ಪರೀಕ್ಷಿಸುವ ಕಾಲಕ್ಕೆ ತನಿಖಾಧಿಕಾರಿಯ ಸೂಚನೆಯಂತೆ, ಪಂಚನಾಮೆಯನ್ನು ಟೈಪ್ ಮಾಡಿ, ಸಹಿ ಮಾಡಿ ತನಿಖಾಧಿಕಾರಿಗೆ ನೀಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ–91 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–91(ಬಿ) ಎಂದು ಗುರುತಿಸಲಾಯಿತು. ಆನಂತರ ತನಿಖಾಧಿಕಾರಿಯು ಈ ಪ್ರಕರಣದ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಳ್ಳುವ ಕಾಲಕ್ಕೆ ತನಿಖಾಧಿಕಾರಿಯ ಸೂಚನೆಯಂತೆ, ಕೆಲವು ಸಾಕ್ಷಿದಾರರ ಹೇಳಿಕೆಗಳನ್ನು ಹಸ್ತಾಕ್ಷರದಲ್ಲಿ ಬರೆದು, ಸಹಿ ಮಾಡಿ ತನಿಖಾಧಿಕಾರಿಗೆ ನೀಡಿರುತ್ತೇನೆ ಹಾಗೂ ಕೆಲವು ಸಾಕ್ಷಿದಾರರ ಹೇಳಿಕೆಗಳನ್ನು ಟೈಪ್ ಮಾಡಿ, ಸಹಿ ಮಾಡಿ ತನಿಖಾಧಿಕಾರಿಗೆ ನೀಡಿರುತ್ತೇನೆ ಹಾಗೂ ತನಿಖೆಗೆ ಸಹಕರಿಸಿದ ಬಗ್ಗೆ ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

4. ನಿಪಿ–64 ಜಪ್ತುಪಂಚನಾಮೆಯಡಿಯಲ್ಲಿ ಜಪ್ತುಪಡಿಸಿಕೊಂಡ ರೈಲ್ವೇ ಟಿಕೇಟುಗಳ ಜೆರಾಕ್ಸ್ ಪ್ರತಿಗಳನ್ನು ಅದೇ ದಿನ ಜೆರಾಕ್ಸ್ ಮಾಡಲಾಗಿರುತ್ತದೆ. ಆ ಸಮಯದಲ್ಲಿ ಒರಿಜಿನಲ್ ಟಿಕೇಟುಗಳು ತನಿಖಾಧಿಕಾರಿಯ ಬಳಿ ಇದ್ದವು. ಜೆರಾಕ್ಸ್ ಪ್ರತಿಗಳನ್ನು ನಾನೇ ಮಾಡಿರುತ್ತೇನೆ ಹಾಗೂ ಅವುಗಳನ್ನು ತನಿಖಾಧಿಕಾರಿಗೆ ನೀಡಿರುತ್ತೇನೆ. ಸದರಿ ಜಪ್ತುಪಂಚನಾಮೆಯನ್ನು ತನಿಖಾಧಿಕಾರಿಯ ಕೊಠಡಿಯಲ್ಲಿ ಲ್ಯಾಪ್ ಟಾಪ್ ಮೂಲಕ ಟೈಪ್ ಮಾಡಿ, ನಂತರ ಅದನ್ನು ಬರಹಗಾರರ ಕೊಠಡಿಯಲ್ಲಿ ಮುದ್ರಿಸಿ, ತನಿಖಾಧಿಕಾರಿಗೆ ನೀಡಿರುತ್ತೇನೆ. ನಿಪಿ–64 ಜಪ್ತುಪಂಚನಾಮೆಯಲ್ಲಿ ಸಹಿ ಮಾಡಿರುವ ಪಂಚರ ಹೆಸರು ಮತ್ತು ವಿಳಾಸ ನನಗೆ ಈಗ ನೆನಪಿಲ್ಲ. ಸದರಿ ಜಪ್ತುಪಂಚನಾಮೆಯ ಪ್ರತೀ ಸಾಲಿನಲ್ಲಿ ಏನು ಬರೆಯಲಾಗಿದೆ ಎಂದು ಹೇಳಲು ಬರುತ್ತದೆಯಾ ಎಂದರೆ, ಸಾಕ್ಷಿಯು ಪ್ರತೀ ಸಾಲಿನಲ್ಲಿ ಏನು ಬರೆಯಲಾಗಿದೆ ಎಂದು ಹೇಳಲು ಬರುವುದಿಲ್ಲ, ಆದರೆ ಒಟ್ಟಾರೆಯಾಗಿ ಪಂಚನಾಮೆಯ ಸಾರಾಂಶವನ್ನು ಹೇಳಬಹುದು ಎಂದು ನುಡಿಯುತ್ತಾರೆ. ಪಂಚನಾಮೆಯನ್ನು ಬರೆಯಲು ತನಿಖಾಧಿಕಾರಿಯು ಮಾಹಿತಿಯನ್ನು ನೀಡಿರುತ್ತಾರೆ. ತನಿಖಾಧಿಕಾರಿಯು ಯಾವುದೇ

ಪಂಚನಾಮೆಯನ್ನು ಮಾಡದೇ ಇದ್ದರೂ ಸಹ, ನಿಪಿ-64 ಪಂಚನಾಮೆಯನ್ನು ನಾನು ಮತ್ತು ತನಿಖಾಧಿಕಾರಿಯು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ, ನಾನು ಯಾವುದೇ ಘಟನಾ ಸ್ಥಳಕ್ಕೆ ಹೋಗಿ ತನಿಖೆಗೆ ಸಹಾಯ ಮಾಡಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ-**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ-**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ-**

ಈ ದಿನ 2 ಮತ್ತು 3 ನೇ ಆರೋಪಿತರ ಪರ ವಕೀಲರು ಗೈರು ಹಾಜರಿದ್ದು, ಅವರ ಪರವಾಗಿ, 1 ನೇ ಆರೋಪಿ ಪರ ವಕೀಲರು ಸದರಿ ವಕೀಲರು ವೈದ್ಯಕೀಯ ಚಿಕಿತ್ಸೆಯಲ್ಲಿರುತ್ತಾರೆ ಎಂದು ತಿಳಿಸಿ, ದಾಖಲೆಯನ್ನು ಹಾಜರುಪಡಿಸಿರುತ್ತಾರೆ. ಆದ್ದರಿಂದ 2 ಮತ್ತು 3 ನೇ ಆರೋಪಿತರ ಪರ ಪಾಟೀ ಸವಾಲನ್ನು ಮುಂದೂಡಲಾಯಿತು.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ.